ನಿಯಮ 21(2)ರ ಅನುಸಾರ 2002-03 ರಲ್ಲಿ ಬಹಿರಂಗ ಹರಾಜಿನ ಮೂಲಕ ಮಂಜೂರು ಮಾಡಿದೆ. ಇದರ ಸಂಬಂಧ ಒಟ್ಟು ರೂ. 2,60,500-00 ಗಳನ್ನು ರಾಜಧನವನ್ನಾಗಿ ಸಂಗ್ರಹಿಸಿದೆ. ಈ ಎರಡು ತಾಲ್ಲೂಕುಗಳಿಂದ ಒಟ್ಟು ರೂ. 43,63,055-00 ಸಂಗ್ರಹವಾಗಿದೆ.

ಇ) ಈ ಪ್ರದೇಶಗಳಲ್ಲಿನ ಮರಳು ಸಾಗಾಣಿಕೆಯಿಂದ 2001-02ನೇ ಸಾಲಿನಲ್ಲಿ ಒಟ್ಟು ರೂ. 12,42,079-00 ಸರ್ಕಾರಕ್ಕೆ ಬಂದಿರುತ್ತದೆ.

ಈ) ಪಾಪಾಗ್ನಿ ನದಿ ಮತ್ತು ಚಿತ್ರಾವತಿ ನದಿಗಳಿಂದ ಮರಳು ಸಾಗಿಸಲಾಗುತ್ತಿತ್ತು. ಪ್ರಸ್ತುತ ಪಾಪಾಗ್ನಿ ನದಿ ಪಾತ್ರದಲ್ಲಿ ಮರಳು ಸಾಗಾಣಿಕೆ ಕಾರ್ಯ ನಿಂತಿರುತ್ತದೆ. ಚಿತ್ರಾವತಿ ನದಿಯಿಂದ ಮಾತ್ರ ಮರಳು ಸಾಗಾಣಿಕೆಯಾಗುತ್ತಿದೆ.

ಗೌರಿಬಿದನೂರು ತಾಲ್ಲೂಕಿನ ಸಿರುಗುಪ್ಪ ಶುಗರ್ ಕಾರ್ಖಾನೆಯಲ್ಲಿ ರೈತರಿಗೆ ಖರೀದಿಸಿದ ಕಬ್ಬಿನ ಹಣ ಪಾವತಿ

1161 (1495) ಶ್ರೀ ಸಂಪಂಗಿ ಎನ್. (ಬಾಗೇಪಲ್ಲಿ) ಮಾನ್ಯ ಪಸುಸಂಗೋಪನೆ ಹಾಗೂ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗೌರಿಬಿದನೂರು ತಾಲ್ಲೂಕಿನ ಸಿರಗುಪ್ಪ ಶುಗರ್ಸ್ ಕಾರ್ಖಾನೆಯಲ್ಲಿ ಕಳೆದ 3 ವರ್ಷಗಳಿಂದಲೂ ರೈತಾಪಿ ವರ್ಗದವರಿಂದ ಖರೀದಿಮಾಡಿಕೊಂಡಿರುವ ಕಬ್ಬಿನ ಪ್ರಮಾಣವೆಷ್ಟು ; ಇವರುಗಳಿಗೆ ವಿತರಿಸಲಾದ ಬಾಕಿ ಮೊತ್ತವೆಷ್ಟು ; (ವಿವರ ಒದಗಿಸುವುದು) ?

ಆ) 3-4 ವರ್ಷಗಳ ಹಿಂದೆಯೇ ಕಬ್ಬನ್ನು ಕಾರ್ಖಾನೆಗೆ ಸರಬರಾಜು ಮಾಡಿದ್ದರೂ ಸರಬರಾಜು ಮಾಡಿದ ಕಬ್ಬಿನ ಹಣವನ್ನು ಸಂದಾಯ ಮಾಡದೇ ಇರುವ ರೈತಾಪಿಗಳ ಸಂಖ್ಯೆ ಎಷ್ಟು ?

ಇ) ಸರಬರಾಜು ಮಾಡಿದ ಕಬ್ಬಿನ ಬಾಕಿ ಮೊತ್ತವನ್ನು ಶೀಘ್ರದಲ್ಲಿ ಬಿಡುಗಡೆ ಮಾಡಲು ಸರ್ಕಾರವು ಕೈಗೊಳ್ಳವ ಕ್ರಮಗಳೇನು ?

ಶ್ರೀ ಎಂ. ಮಹದೇವ್ (ಪಶುಸಂಗೋಪನೆ ಹಾಗೂ ಸಕ್ಕರೆ ಸಚಿವರು) :

ಅ) ಗೌರಿಬಿದನೂರು ತಾಲ್ಲೂಕಿನ ಸಿರಗುಪ್ಪ ಶುಗರ್ಸ್ ಇದು ಕಳೆದ 3 ವರ್ಷಗಳಲ್ಲಿ 1999-2000 ಮತ್ತು 2000-01ನೇ ಸಾಲುಗಳಲ್ಲಿ ಮಾತ್ರ ಕಬ್ಬು ನುರಿಸಿದ್ದು, 2001-02ನೇ ಸಾಲಿಗೆ ಕಬ್ಬು ನುರಿಸಿರುವುದಿಲ್ಲ ಮತ್ತು 2002-03ನೇ ಸಾಲಿನ ಕಬ್ಬು ನುರಿಸುವ ಹಂಗಾಮು ಸಹ ಪ್ರಾರಂಭಿಸಿರುವುದಿಲ್ಲ.

1999-2000 ಮತ್ತು 2000-01ನೇ ಸಾಲುಗಳಲ್ಲಿ ರೈತರಿಂದ ಖರೀದಿಸಿದ ಕಬ್ಬಿನ ಪ್ರಮಾಣ ಮತ್ತು ಬಾಕಿ ಪಾವತಿಸಿದ ವಿವರ ಈ ಕೆಳಕಂಡಂತೆ ಇರುತ್ತದೆ.

ವರ್ಷ	ಕಬ್ಬು ಖರೀದಿ ಪ್ರಮಾಣ ಮೆ.ಟನ್‌ಗಳಲ್ಲಿ	ಕಬ್ಬಿನ ಬಿಲ್ ಪಾವತಿ ಮಾಡಿರುವುದು
1999-2000	1,31,850	861,32 ಲಕ್ಷ
2000-01	58,851	62,83 ಲಕ್ಷ
2001-02	ಕಬ್ಬು ನುರಿಸಿರುವುದಿಲ್ಲ	

ಆ) ಕಾರ್ಖಾನೆ 1999-2000 ಮತ್ತು 2000-01 ರ ಬಾಬ್ತು ರೈತರಿಂದ ಖರೀದಿಸಿದ ಕಬ್ಬಿನ ಬಾಬ್ತು ಈ ಕೆಳಕಂಡಂತೆ ಕಬ್ಬಿನ ಹಣ ಪಾವತಿಸಬೇಕಾಗಿರುತ್ತದೆ.

1999-2000	ರೂ.	137.00	ಲಕ್ಷ
2000-2001	ರೂ.	286.75	ಲಕ್ಷ
		423.75	ಲಕ್ಷ

ಕಾರ್ಖಾನೆಯ ಕಾರ್ಯ ಕಳೆದೆರಡು ವರ್ಷಗಳಿಂದ ಸ್ಥಗಿತಗೊಂಡಿರುವುದರಿಂದ ರೈತರ ಸಂಖ್ಯೆಯ ಮಾಹಿತಿ ಲಭ್ಯವಿರುವುದಿಲ್ಲ.

ಇ) ಸಿರಗುಪ್ಪ ಶುಗರ್ಸ್ ಅಂಡ್ ಕೆಮಿಕಲ್ಸ್ ಲಿ., ಗೌರಿಬಿದನೂರು ಇವರಿಂದ ರೈತರಿಗೆ ಬಾಕಿ ಇರುವ ಕಬ್ಬಿನ ಹಣವನ್ನು ಭೂ ಕಂದಾಯದ ಬಾಕಿ ರೂಪದಲ್ಲಿ ಕಾರ್ಖಾನೆಯಿಂದ ವಸೂಲ್ಮಾಡಿ ರೈತರಿಗೆ ಪಾವತಿಸಲು ಸಕ್ಕರೆ ನಿರ್ದೇಶಕರು ಕಬ್ಬು ನಿಯಂತ್ರಣ ಆದೇಶದ ನಿಯಮ 3(8) ರ ಅಡಿ ಅಧಿಕಾರ ಚಲಾಯಿಸಿ ಜಿಲ್ಲಾಧಿಕಾರಿ, ಕೋಲಾರ ಇವರಿಗೆ ದಿನಾಂಕ: 26-9-2001 ರಲ್ಲಿ "ವಸೂಲಾತಿ ಪ್ರಮಾಣ ಪತ್ರ" ನೀಡಿರುತ್ತಾರೆ. ಇದರಂತೆ ಜಿಲ್ಲಾಧಿಕಾರಿಗಳು, ಕೋಲಾರ ಇವರು ಕಾರ್ಖಾನೆಯ ಚರ ಮತ್ತು ಸ್ಥಿರಾಸ್ತಿಗಳನ್ನು ಜಪ್ತಿ ಮಾಡಿರುತ್ತಾರೆ. ಇವರ ವಿರುದ್ಧ ಕಾರ್ಖಾನೆಯ ಆಡಳಿತ ವರ್ಗ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಿಸಿದ್ದ ರಿಟ್ ಅರ್ಜಿ ಸಂಖ್ಯೆ 440683 : 2001 ನ್ನು ನ್ಯಾಯಾಲಯವು ದಿನಾಂಕ: 2-12-2002 ರಲ್ಲಿ ಇತ್ಯರ್ಥ ಪಡಿಸುತ್ತಾ ಸಕ್ಕರೆ ನಿರ್ದೇಶಕರ ದಿನಾಂಕ: 26-9-2001 ರ ಆದೇಶವನ್ನು ಎತ್ತಿ ಹಿಡಿದಿರುತ್ತರೆ. ಹಾಗೂ ಸಕ್ಕರೆ ಮಾರಾಟ ಮಾಡಿ ಬರುವ ಹಣದಲ್ಲಿ ಮೊದಲು ಅಬಕಾರಿ ಸುಂಕ ಪಾವತಿಸಿ, ಉಳಿದ ಮೊತ್ತದಲ್ಲಿ ರೈತರ ಕಬ್ಬು ಬಿಲ್ ಬಾಕಿಗೆ ಪಾವತಿಸಲು ಆದೇಶಿಸಿರುತ್ತವೆ. ಕಾರ್ಖಾನೆ ಬಿ.ಐ.ಎಫ್.ಆರ್., ಮುಂದೆ ದಾಖಲಿಸಿರುವ ಪ್ರಕರಣ ಸಂಖ್ಯೆ 371.2001 ಅಂತಿಮವಾಗಿ ತೀರ್ಮಾನವಾಗ ಬೇಕಾಗಿರುತ್ತದೆ.

ರಾಜ್ಯದಲ್ಲಿ ಸಕ್ಕರೆ ದಾಸ್ತಾನು

1164 (514) ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) ಮಾನ್ಯ ಪಶು ಸಂಗೋಪನೆ ಹಾಗೂ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಈ ವರ್ಷ ಸರ್ಕಾರಿ, ಸಹಕಾರಿ ಮತ್ತು ಖಾಸಗಿ ಸಕ್ಕರೆ ಕಾರ್ಖಾನೆಗಳಲ್ಲಿರುವ ಸಕ್ಕರೆಯ ದಾಸ್ತಾನು ಎಷ್ಟು ?

ಆ) ಇದನ್ನು ವಿಲೇವಾರಿ ಮಾಡಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ?

ಇ) ಈ ವರ್ಷ ಸಕ್ಕರೆ ಕಾರ್ಖಾನೆಯವರು ಕಬ್ಬು ಬೆಳೆಗಾರರಿಂದ ಕಬ್ಬನ್ನು ಖರೀದಿ ಮಾಡದಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ) ಬಂದಿದ್ದಲ್ಲಿ, ಈ ಸಮಸ್ಯೆಯನ್ನು ನಿವಾರಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ; (ವಿವರಗಳನ್ನು ನೀಡುವುದು) ?

ಶ್ರೀ ಎಂ. ಮಹದೇವ್ (ಪಶು ಸಂಗೋಪನೆ ಹಾಗೂ ಸಕ್ಕರೆ ಸಚಿವರು) :

ಅ) ರಾಜ್ಯದಲ್ಲಿ ಈ ವರ್ಷ ಸರ್ಕಾರಿ : ಸಹಕಾರಿ ಮತ್ತು ಖಾಸಗಿ ಸಕ್ಕರೆ ಕಾರ್ಖಾನೆಗಳಲ್ಲಿ ದಿನಾಂಕ: 31.1.2003ರಲ್ಲಿದ್ದಂತೆ 12.93 ಲಕ್ಷ ಮೆ.ಟನ್ ಸಕ್ಕರೆ ದಾಸ್ತಾನಿರುತ್ತದೆ. ಸಕ್ಕರೆ ದಾಸ್ತಾನಿನ ವಿವರವು ಈ ಕೆಳಕಂಡಂತಿವೆ :

1) ಸಹಕಾರಿ ವಲಯ - 5.94 ಲಕ್ಷ ಮೆ.ಟನ್

2) ಖಾಸಗಿ ವಲಯ - 6.25 ಲಕ್ಷ ಮೆ.ಟನ್